# ನಗರಸಭೆ ಕಾರ್ಯಾಲಯ,ರಾಣೇಬೆನ್ನೂರು

ಸಂಖ್ಯೆ ನಸರಾ:ಕಾಮಗಾರಿ:12ನೇ ಹಣಕಾಸು:ಟೆಂ:ವಹಿ: :2008–09 ದಿನಾಂಕ: 25/10/2008

## ಟೆಂಡರ್ ಪ್ರಕಟಣೆ

ಕರ್ನಾಟಕ ಪುರಸಭೆ ಕಾಯಿದೆ 1964 ಹಾಗೂ ಕ.ಸಾ.ಸಂ.ಪಾ.ಅ 1999 ( ತಿದ್ದುಪಡಿ ನಿಯಮಗಳಂತೆ )ರ ಪ್ರಕಾರ ಲೋಕೋಪಯೋಗಿ ಇಲಾಖೆಯ ಸಿವಿಲ್ ಗುತ್ತಿಗೆದಾರರೆಂದು ಲೈಸನ್ಸ್ ಪಡೆದ ರಾಣೇಬೆನ್ನೂರ ನಗರಸಭೆಯ ಕಛೇರಿಯಲ್ಲಿಯೂ ಸಹ ಗುತ್ತಿಗೆದಾರರೆಂದು ನೊಂದಾಯಿಸಿದವರಿಗೆ ತಿಳಿಯಪಡಿಸುವುದೇನೆಂದರೆ 12ನೇ ಹಣಕಾಸು ಯೋಜನೆಯಡಿಯಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಿಸುವ ಕಾಮಗಾರಿಗಳಿಗೆ (ಕಾಮಗಾರಿಗಳ ಮೊತ್ತ ರೂ.36,06, ಲಕ್ಷಗಳು) ದ್ವಿಪ್ರತಿಗಳಲ್ಲಿ ಟೆಂಡರನ್ನು ಕರೆಯಲಾಗಿದೆ.

| ಅ.ನಂ | ಕಾಮಗಾರಿ ವಿವರ | ಅಂದಾಜು ರಕಂ | ಇ.ಎಂ.ಡಿ ಹಣ | ಗುತ್ತಿಗೆದಾರರ ದರ್ಜೆ |
|---|---|---|---|---|
| 1 | ವಾರ್ಡ ನಂ.18 ನೆಹರೂ ಮಾರ್ಕೆಟ್ ಪ್ರದೇಶದಲ್ಲಿರುವ ಅಕ್ಕಿ ಪೇಟೆ ಹಾಗೂ ಇತರೆ ಅಡ್ಡ ರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಿಸುವುದು | ರೂ.21,00,000/– | ರೂ.21,000/– | 1 ನೇ ದರ್ಜೆ |
| 2 | ರಾಷ್ಟ್ರೀಯ ಹೆದ್ದಾರಿ ಬಾಜು ಮ್ಯಾಗೇರಿ ರಸ್ತೆಯಿಂದ ಶೆಟ್ರ ಪೆಟ್ರೋಲ್ ಬಂಕ್‌ವರೆಗೆ ಚರಂಡಿ ನಿರ್ಮಿಸುವುದು | ರೂ.16,06,000/– | ರೂ.24,900/– | 1 ನೇ ದರ್ಜೆ |

**1) ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 12/11/2008.**
**2) ತಯಾರಿಸಿದ ಟೆಂಡರ್ ನಮೂನೆಯನ್ನು ಗುತ್ತಿಗೆದಾರರಿಗೆ ಈ ಕಾರ್ಯಾಲಯದ ಕಛೇರಿ ವೇಳೆಯಲ್ಲಿ ನೀಡುವ ದಿನಾಂಕ : 21/11/2008.**
**3) ಭರ್ತಿ ಮಾಡಿದ ಟೆಂಡರ್ ನಮೂನೆಗಳನ್ನು ಟೆಂಡರ್ ಪೆಟ್ಟಿಗೆಯಲ್ಲಿ ದಿನಾಂಕ; 25/11/2008. ಸಮಯ 4.30 ಘಂಟೆಯೊಳಗಾಗಿ ಹಾಕತಕ್ಕದ್ದು.**
**4) ಟೆಂಡರ್ ಬಾಕ್ಸನ್ನು ತೆರೆಯುವ ದಿನಾಂಕ : 26/11/2008.**

ಸೂಚನೆ : ಹೆಚ್ಚಿನ ಮಾಹಿತಿ ಷರತ್ತು ಮತ್ತು ನಿಬಂದನೆಗೆ ನಗರಸಭೆ ಕಾರ್ಯಾಲಯದ ಕಾಮಗಾರಿ ವಿಭಾಗದಲ್ಲಿ ಅಥವಾ http//www.Ranebennurcity.gov.in ಪಡೆಯಬಹುದಾಗಿದೆ.

( ರಾಮಪ್ಪ.ಭೀಮಪ್ಪ.ಕೊಲಕಾರ )
ಅಧ್ಯಕ್ಷರು
ನಗರಸಭೆ ರಾಣೇಬೆನ್ನುರು

(ಎನ್.ರೇಣುಕಾ.ಕೆ.ಎಂ.ಎ.ಎಸ್)
ಪೌರಾಯುಕ್ತರ
ನಗರಸಭೆ ರಾಣೇಬೆನ್ನೂರು

ಸಂಖ್ಯೆ ನಸರಾ:ಕಾಮಗಾರಿ:12ನೇ ಹಣಕಾಸು:ಟೆಂ:ವಹಿ:05:2008–09 ದಿನಾಂಕ: 25/10/2008

## ಷರತ್ತು ಮತ್ತು ನಿಬಂಧನೆಗಳು

1) ಈ ಕಾಮಗಾರಿಗಳನ್ನು ನಿರ್ವಹಿಸಲು 1 ನೇ ದರ್ಜೆ ಅರ್ಹತೆ ಹೊಂದಿದವರಾಗಿರತಕ್ಕದ್ದು ಹಾಗೂ ಅರ್ಜಿ ಜೊತೆ ಗುತ್ತಿಗೆದಾರರು ಭಾವ ಚಿತ್ರ ಸಹಿತದ ಪರವಾನಗಿ ಪತ್ರ (ಪಿ.ಡುಬ್ಲ್ಯೂ.ಡಿ& ನಗರಸಭೆ) ದೃಡೀಕೃತ ಪತ್ರಯನ್ನು ಸಲ್ಲಿಸತಕ್ಕದ್ದು.
2) ಲೋಕೋಪಯೋಗಿ ಇಲಾಖೆಯಲ್ಲಿ ಲೈಸೆನ್ಸ್ ಹೊಂದಿದವರು ನಗರಸಭೆಯಲ್ಲಿಯು ಕೂಡಾ ಚಾಲ್ತಿ ಸಾಲಿನಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು.
3) ಕಾಮಗಾರಿ ಕೆಸಲ ಪೂರ್ಣಗೊಳಿಸಬೇಕಾದ ಅವದಿ 6 ತಿಂಗಳು
4) ಟೆಂಡರ್ ನಮೂನೆಯ ಬೆಲೆ ಅಂದಾಜು ಪತ್ರಿಕೆಯ ಒಟ್ಟು ಮೊತ್ತಕ್ಕೆ ಶೇ.0.1 ರಷ್ಟು
5) ಟೆಂಡರ್ ನಮೂನೆ ಸಲುವಾಗಿ ಅರ್ಜಿಗಳನ್ನು ಪಡೆಯಲು ನಗರಸಭೆ ಕಛೇರಿಯಲ್ಲಿ ಅರ್ಜಿ ಸಲ್ಲಿಸಿ ಪಡೆಯುವ ಕೊನೆಯ ದಿನಾಂಕ:12/11/2008 ಸಂಜೆ 5.30ರ ಒಳಗಾಗಿ ಇರುತ್ತದೆ. ಟೆಂಡರ್ ನಮೂನೆಯ ಶುಲ್ಕವನ್ನು ಆ ದಿನವೇ ಪಾವತಿಸತಕ್ಕದ್ದು.
6) ತಯಾರಿಸಿದ ಟೆಂಡರ್ ನಮೂನೆಗಳನ್ನು ಗುತ್ತಿಗೆದಾರರಿಗೆ ಈ ಕಾರ್ಯಾಲಯದಲ್ಲಿ 21/11/2008 ರಿಂದ ಕಛೇರಿ ವೇಳೆಯಲ್ಲಿ ಮಾತ್ರ ನೀಡಲಾಗುವುದು.
7) ಎಲ್ಲಾ ವಿವರಗಳನ್ನು ಭರ್ತಿ ಮಾಡಿದ ಟೆಂಡರಿನ ನಮೂನೆ ಜೊತೆಗೆ ಇ.ಎಂ.ಡಿ ಹಣವನ್ನು ಪೌರಾಯುಕ್ತರ ಪದನಾಮಾಂಕಿತದಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ.ಪಡೆದು ದ್ವಿಪ್ರತಿಗಳ ಟೆಂಡರ್ ನಮೂನೆಯೊಂದಿಗೆ ಲಗತ್ತಿಸಿ, ಲಕೋಟೆಯನ್ನು ಸೀಲ್ ಬಂದ್ ಮಾಡಿ, ಇದೇ ಉದ್ದೇಶಕ್ಕಾಗಿ ನಗರಸಭೆಯಲ್ಲಿ ಇಡಲಾದ ಟೆಂಡರ್ ಪೆಟ್ಟಿಗೆಯಲ್ಲಿ ದಿನಾಂಕ:25/11/2008ರ 4.30

ಘಂಟೆಗಳೊಳಗಾಗಿ ಹಾಕತಕ್ಕದ್ದು. ನಿಗಧಿತ ಅವಧಿ ನಂತರ ಬರುವ ಟೆಂಡರ್‌ಗಳನ್ನು ಯಾವುದೇ ರೀತಿಯಿಂದಲು ಸ್ವೀಕರಿಸಲಾಗುವುದಿಲ್ಲ.

8) ಟೆಂಡರ್ ಬಾಕ್ಸ್‌ನ್ನು ದಿನಾಂಕ:26/11/2008 ರಂದು ರಾಣೇಬೆನ್ನೂರು ನಗರಸಭೆಯಲ್ಲಿ ಲಭ್ಯವಿದ್ದ ಗುತ್ತಿಗೆದಾರ ಸಮ್ಮುಖದಲ್ಲಿ ತೆರೆಯಲಾಗುವುದು.
9) ಟೆಂಡರಗಾಗಿ ಪಾವತಿಸಿದ ಇ.ಎಂ.ಡಿ ಹಣಕ್ಕೆ ಬಡ್ಡಿ ನೀಡಲಾಗುವುದಿಲ್ಲಿ. ನಾಮಂಜೂರಾದ ಗುತ್ತಿಗೆದಾರರ ಇ.ಎಂ.ಡಿ ಹಣವನ್ನು ಟೆಂಡರ ಮಂಜೂರಾದ ನಂತರ ಹಿಂದಿರಿಗಿಸ ಲಾಗುವುದು.
10) ಮೇಲ್ಕಂಡ ಕಾಮಗಾರಿಗಳು ಪೂರ್ಣಗೊಂಡ ದಿನಾಂಕದಿಂದ ಕಾಮಗಾರಿ ನಿರ್ವಹಣೆಗೆ 2 ವರ್ಷಗಳ ಅವಧಿಗೆ ಗುತ್ತಿಗೆದಾರರು ಯಾವುದೇ ಹೆಚ್ಚಿನ ವೆಚ್ಚವಿಲ್ಲದೆ ನಿರ್ವಹಿಸತಕ್ಕದ್ದು. ಅಲ್ಲಿಯವರೆಗೆ ಇ.ಎಂ.ಡಿ ಮತ್ತು ಎಸ್.ಡಿ ಮೊತ್ತ ಹಿಂದಿರುಗಿಸಲಾಗುವುದಿಲ್ಲ.
11) ಗುತ್ತಿಗೆದಾರರು ಕಾಮಗಾರಿಯ ಪ್ರಾರಂಭಿಸಿ ಹಂತ, ಮಧ್ಯಂತರದ ಹಂತದಲ್ಲಿ ಹಾಗೂ ಮುಕ್ತಾಯದ ಹಂತದಲ್ಲಿರುವ ಕಾಮಗಾರಿ ನಿರ್ವಹಣೆಯ ಭಾವ ಚಿತ್ರಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.
12) ಈ ಮೇಲೆ ನಮೂದಿಸಿದ ದಿನಾಂಕಗಳಿಂದು ಸರ್ಕಾರಿ ರಜೆಗಳು ಬಂದಲ್ಲಿ ಕಛೇರಿಯ ಮುಂದಿನ ದಿನಾಂಕವೆಂದು ಬಾವಿಸತಕ್ಕದ್ದು.
13) ಟೆಂಡರ್ ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಹೊಂದಿರುತ್ತದೆ.
14) ಟೆಂಡರ್‌ಗಾಗಿ ಇ.ಎಂ.ಡಿ ಹಣ ಪಾವತಿಸದಿರುವ ಚೆಕ್ಕುಗಳನ್ನು ಲಗತ್ತಿಸಿರುವ ಮತ್ತು ಮಾಹಿತಿ ಅಪೂರ್ಣವಿರುವ ಟೆಂಡರಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.
15) ಕಾಮಗಾರಿಯ ಅಂದಾಜು ಮೊತ್ತಕ್ಕಿಂತ ಕಡಿಮೆ ದರಕ್ಕೆ ಮಾಡಲು ಇಚ್ಚಿಸಿದ ಗುತ್ತಿಗೆದಾರರು ಕಡಿಮೆ ದರದ ಮೊಬಲಗಿಗೆ ಟೆಂಡರ್ ನಮೂನೆ ಜೊತೆಯಲ್ಲಿಯೇ ಡಿ.ಡಿ ಅಥವಾ ನಗರದು ರೂಪದಲ್ಲಿ ಪಾವತಿ ಮಾಡಿದ ರಸೀತಿಯೊಂದಿಗೆ ಟೆಂಡರ್ ನಮೂನೆ ಲಗತ್ತಿಸಿ ಸಲ್ಲಿಸತಕ್ಕದ್ದು.
16) ಸರ್ಕಾರದ ಹಾಗೂ ಪೌರಾಡಳಿತ ನಿರ್ದೇಶನಾಲಯದ ಇತ್ತೀಚಿನ ಸುತ್ತೋಲೆ ಮತ್ತು ಮಾರ್ಗದರ್ಶನಗಳನ್ವಯ ನಡೆದುಕೊಳ್ಳಲು ಗುತ್ತಿಗೆದಾರರು ಬದ್ದರಾಗಿರತಕ್ಕದ್ದು.
17) ಹೆಚ್ಚಿನ ಮಾಹಿತಿಯನ್ನು ನಗರಸಭೆ ಕಾರ್ಯಾಲಯದ ಕಾಮಗಾರಿ ವಿಭಾಗದಲ್ಲಿ ಅಥವಾ ಕಛೇರಿಯಲ್ಲಿ ಹಾಗೂ ನಗರಸಭೇ ವೆಬಸೈಟ್ http:www.ranebennurcity.gov.in ಪಡೆಯಬಹುದಾಗಿದೆ.
18) ಸರ್ಕಾರದ ಆದೇಶದನ್ವಯ ಕಾರ್ಮಿಕರ ಭವಿಶ್ಯ ನಿಧಿಗಾಗಿ ಅಂದಾಜು ಪತ್ರಿಕೆಯ ಶೇ 1 ರಷ್ಟುನ್ನು ಬಿಲ್ಲಿನಲ್ಲಿ ಮುರಿದುಕೊಳ್ಳಲಾಗುವುದು.
19) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟಿರುವ ಕಾಮಗಾರಿಗೆ ಅರ್ಜಿಸಲ್ಲಿಸುವವರು ಇತ್ತೀಚಿನ ಜಾತಿ ಪ್ರಮಾಣ ಪತ್ರವನ್ನು ಅರ್ಜಿ ಜೊತೆಗೆ ಸಲ್ಲಿಸಬೇಕು.
20) ನಗರಸಭೆ ಆರ್ಥಿಕ ಪರಿಸ್ಥಿತಿ ಅನುಗುಣವಾಗಿ ಸಂಬಂಧಿಸಿದ ಗುತ್ತಿಗೆದಾರರಿಗೆ ಕಾಮಗಾರಿ ಬಿಲ್ಲಿನ ಮೊತ್ತವನ್ನು ಪಾವತಿಸಲಾಗುವುದು

| | |
|---|---|
| -ಸಹಿ- | -ಸಹಿ- |
| (ರಾಮಪ್ಪ.ಭೀಮಪ್ಪ.ಕೊಲಕಾರ) | (ಎನ್.ರೇಣುಕ ಕೆ.ಎಂ.ಎ.ಎಸ್) |
| ಅಧ್ಯಕ್ಷರು | ಪೌರಾಯುಕ್ತರು |
| ನಗರಸಭೆ ರಾಣೇಬೆನ್ನೂರು | ನಗರಸಭೆ ರಾಣೇಬೆನ್ನೂರು |